**ಅಸಲು ದಾವ ಸಂಖ್ಯೆ: 400/2018**

**ಪಿ.ಡಬ್ಲೂ -1**

ದಿಃ 03.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು 1 ರಿಂದ 8 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ ಬಿ ಬಿ ರವರಿಂದಃ-**

1. ದಾವಾ ಸ್ವತ್ತಾದ ಸಿಟಿಎಸ್ ನಂಬರ 5741 ರ ಉತಾರಾ ನಿಪಿ-6 ರಂತೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ದೀನಾನಾತ ರಾಜಾರಾಮ ಕಾರೇಕರ ರವರ ಹೆಸರು ಸದರಿ ಸ್ವತ್ತಿನ ಸಿಟಿಎಸ್ ಉತಾರಾದಲ್ಲಿ ದಿಃ 16-06-1998 ರಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ದಿಃ15-05-1998 ರ ಖರೀದಿ ಪತ್ರದ ಆಧಾರವಾಗಿ ಸದರಿ ಸಿಟಿಎಸ್ ಉತಾರಾದಲ್ಲಿ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ರೀತಿ ಖರೀದಿ ಪತ್ರ ಆಗಿರುವುದಿಲ್ಲ ಕೇವಲ 3 ಲಕ್ಷ ಮುಂಗಡ ಹಣ ಪಡೆದ ಆಧಾರದ ಮೇಲೆ ಸಿಟಿಎಸ್ ಉತಾರ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಕನ್ನಡ ಭಾಷೆ ಓದಲು ಬರುತ್ತದೆ. ನಾನು ಈಗ ನಿಪಿ-6 ಸಿಟಿಎಸ್ ಉತಾರಾ ನೋಡುತ್ತಿದ್ದು ಅದರಲ್ಲಿ ನಾನು ಹೇಳಿದಂತೆ ನಮೂದಾಗಿರುವುದಿಲ್ಲ. ನಿಪಿ-6 ರಲ್ಲಿ ನಮೂದಾಗಿರುವಂತೆ ಅದರಲ್ಲಿ ಬರೆದಿರುವ 3 ವ್ಯಕ್ತಿಗಳು ಹಾಗೂ ಅವರ ಅಕ್ಕತಂಗಿಯರ ಜಿಪಿಎ ಹೊಂದಿರುವವರು ಆಗಿ ರೂಪಾಯಿ 3 ಲಕ್ಷಕ್ಕೆ ಖರೀದಿ ಪತ್ರ ಆಗಿರುತ್ತದೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-6 ರ ಸಿಟಿಎಸ್ ಉತಾರಾದಲ್ಲಿ ನಮೂದಾಗಿರುವುದು ತಪ್ಪಾಗಿರುತ್ತದೆ ಎಂದು ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಸದರಿ ಸಿಟಿಎಸ್ ಉತಾರಾದಲ್ಲಿ ನಮೂದಾಗಿರುವ ವಿಚಾರಗಳ ಬಗ್ಗೆ ನನಗೆ ಯಾವಾಗ ತಿಳಿಯಿತು ಎಂದು ದಿನಾಂಕ ನೆನಪಿಲ್ಲ. ಸಿಟಿಎಸ್ ಉತಾರಾದಲ್ಲಿ ಹೆಸರು ನಮೂದಾದ 2-3 ತಿಂಗಳ ನಂತರ ನನಗೆ ಅದರ ಬಗ್ಗೆ ತಿಳಿಯಿತು. 1 ನೇ ಪ್ರತಿವಾದಿ ಎಂದರೆ ದೀನಾನಾತ ರಾಜರಾಮ ಕಾರೇಕರ ಎಂದರೆ ಸರಿ. ನಮ್ಮ ಕರಾರು ಪತ್ರದಲ್ಲಿ ಒಂದು ಗುಂಟೆಗೆ 1 ಲಕ್ಷ 95 ಸಾವಿರ ಮೊತ್ತವನ್ನು ನಿಗಧಿಪಡಿಸಿ ನಂತರ ಸ್ವತ್ತನ್ನು

ಅಳತೆ ಮಾಡಿ ಒಟ್ಟು ಮೊತ್ತವನ್ನು ನಿಗಧಿಪಡಿಸುವುದಾಗಿ ಕರಾರು ಆಗಿತ್ತು ಎಂದರೆ ಸರಿ. ಆ ರೀತಿ ಅಳತೆ ಆದ ನಂತರ ಒಟ್ಟು ಕರಾರು ಮೊತ್ತ 7 ಲಕ್ಷದ 80 ಸಾವಿರ ರೂಪಾಯಿ ಎಂದು ನಿಗಧಿಪಡಿಸಲಾಯಿತು ಎಂದರೆ ಸರಿಯಲ್ಲ. ನನ್ನ ಪ್ರಕಾರ ಆ ರೀತಿ ಅಳತೆ ಮಾಡಿದ ನಂತರ ಕರಾರು ಪತ್ರದ ಮೊತ್ತ 10 ಲಕ್ಷ ಎಂದು ನಿಗಧಿಪಡಿಸಲಾಗಿತ್ತು.

2. ಕ್ರಯ ಪತ್ರದ ಬಾಂಡ ಪೇಪರನ್ನು ನನ್ನ ಅಣ್ಣನಾದ ಬಾಬಾಜಾನ ಇನಾಮದಾರ ರವರ ಹೆಸರನಲ್ಲಿ ಖರೀದಿಸಲಾಗಿತ್ತು ಎಂದರೆ ಸಾಕ್ಷಿಯು ಆ ರೀತಿ ಕ್ರಯ ಪತ್ರ ಆಗಿರಲಿಲ್ಲ ಬದಲಾಗಿ ಕ್ರಯದ ಕರಾರು ಪತ್ರ ಮಾತ್ರ ಆಗಿತ್ತು ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿಯು ಮೂಲ ಕ್ರಯ ಪತ್ರವನ್ನು ಹಾಜರುಪಡಿಸಬೇಕೆಂದು ಆದೇಶಿಸಬೇಕೆಂದು ನಾನು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಕ್ರಯ ಪತ್ರವು ನನ್ನ ಮುಖ್ಯ ವಿಚಾರಣೆ ಸಂದರ್ಭದಲ್ಲಿ ನಿಪಿ-5 ಎಂದು ಈಗಾಗಲೇ ಗುರುತಿಸಲಾಗಿದೆ ಎಂದರೆ ಸರಿ. ನಾನು ಈಗ ನಿಪಿ-5 ನೋಡುತ್ತಿದ್ದು ಅದರಲ್ಲಿ ಸ್ಟಾಂಪ ಕಾಗದವನ್ನು ಬಾಬಾಜಾನ ಇನಾಮದಾರ ರವರು ಖರೀದಿಸಿರುವುದಾಗಿ ನಮೂದು ಇರುತ್ತದೆ ಎಂರದೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದರಲ್ಲಿ ಬಾಬಸಾಬ ಎಮ್ ಇನಾಮದಾರ ಎಂದು ನಮೂದು ಇರುತ್ತದೆ ಆದರೆ ನನ್ನ ಅಣ್ಣನ ಹೆಸರು ಬಾಬಾಜಾನ ಇನಾಮದಾರ ಎಂದು ನುಡಿಯುತ್ತಾರೆ. ನನ್ನ ಅಣ್ಣನ ಹೆಸರು ಬಾಬಾಜಾನ ಮಹಮೂದಪಾಶಾ ಇನಾಮದಾರ ಆಗಿರುತ್ತದೆ. ನನ್ನ ಅಣ್ಣನನ್ನು ಬಾಬಾಸಾಬ ಎಂದೂ ಸಹ ಕರೆಯುತ್ತಾರೆ ಎಂದರೆ ಸರಿಯಲ್ಲ. ನಿಪಿ-5 ರ 1 ನೆ ಪುಟದ 2 ನೇ ಸಾಲಿನಲ್ಲಿ ಬಾಬಸಾಬ ಅಲಿಯಾಸ ಬಾಬಾಜಾನ ಮೆಹಮೂದ ಪಾಶಾ ಇನಾಮದಾರ ಎಂದು ನಮೂದು ಇರುತ್ತದೆ ಎಂದರೆ ಸರಿ.

3. ಪಾಚಾಸಾಬ ಮೆಹಮೂದಪಾಶಾ ಇನಾಮದಾರ ಎಂದರೆ ನಾನು ಎಂದರೆ ಸರಿ. ಬಾಪುಸಾಬ ಮೆಹಮೂದಪಾಶಾ ಇನಾಮದಾರ ಎಂದರೆ ನನ್ನ ಚಿಕ್ಕ ತಮ್ಮ ಎಂದರೆ ಸರಿ. ಅದೇ

ರೀತಿ ಸರ್ದಾರಬಿ ಬಸೀರಹ್ಮದ ಜಮಾದಾರ, ನೂರಜಹಾನ ಅಬ್ದುಲ ರಜಾಕ ಮುಲ್ಲಾ, ಖುರ್ಶಿದಾ ಬೇಗಮ ಬಾಬಸಾಬ ಇನಾಮದಾರ, ಬಿಬಿಜಾನ ಸಾಯಿಪಾಶಾ ಇನಾಮದಾರ, ಸಾಹೆಬನಿ ಜೈರುದ್ದೀನ ದಪೇದಾರ ಎಂದರೆ ನನ್ನ ಸಹೋದರಿಯರು ಎಂದರೆ ಸರಿ. ಈ 5 ಜನ ಸಹೋದರಿಯರು ನನ್ನ ಅಣ್ಣನಾದ ಬಾಬಾಜಾನ ಮೆಹಮೂದಪಾಶಾ ಇನಾಮದಾರ ರವರ ಹೆಸರಿಗೆ ಮುಖ್ತಿಯಾರ ನಾಮೆಯನ್ನು (power of attorney) ಬರೆದುಕೊಟ್ಟಿದ್ದರು ಎಂದರೆ ಸರಿ. ಕ್ರಯದ ಕರಾರು ಪತ್ರವನ್ನು ಮಾಡಿದ ನಂತರ ಸ್ವತ್ತಿನ ಅಳತೆ ಕೈಗೊಂಡ ನಂತರ ಕ್ರಯದ ಪ್ರತಿಫಲವನ್ನು 7 ಲಕ್ಷದ 80 ಸಾವಿರ ಹಣವನ್ನು ಪ್ರತಿವಾದಿ ದೀನಾನಾತ ರಾಜಾರಾಮ ಕಾರೇಕರ ರವರು ನನಗೆ ಆಗಾಗ ಕೊಟ್ಟು ಮುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯ ಮುಂದುವರೆದು ಕರಾರು ಪತ್ರದ ಅಡಿಯಲ್ಲಿ ತನಗೆ 3 ಲಕ್ಷ ಹಣ ಮಾತ್ರ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಕ್ರಯದ ಪ್ರತಿಫಲದ ಹಣದ ಬಗ್ಗೆ ನನ್ನ ಸಹೋದರಿಯರಿಗೆ ನಾನು ತಿಳಿಸಿದ್ದೆ.

4. ನಾನು 1998 ರಲ್ಲಿ ಆದಾಯ ತೆರಿಗೆ ಪಾವತಿ ಮಾಡುತ್ತಿರಲಿಲ್ಲ. ಆದಾಯ ತೆರಿಗೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಹಾಗೂ ನನ್ನ ಸಹೋದರಿಯರಿಗೆ ಮೊತ್ತದ ಬಗ್ಗೆ ತಿಳಿಸಬಾರದೆಂದು ಖರೀದಿ ಪತ್ರದಲ್ಲಿ ಕಡಿಮೆ ಮೊತ್ತವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯಿಂದ 3 ಲಕ್ಷ ಹಣ ಪಡೆದ ಬಗ್ಗೆ ಯಾವ ದಾಖಲೆ ಇದೆ ಹಾಗೂ ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೀನಾ ಎಂದು ನನಗೆ ಗೊತ್ತಿಲ್ಲ. ನಿಪಿ-5 ರ ಖರೀದಿ ಪತ್ರದಲ್ಲಿ ಸದರಿ ಪತ್ರವಾದ ದಿನ ಉಪನೋಂದಣಾಧಿಕಾರಿ ಸಮಕ್ಷಮ ನನ್ನ ಅಣ್ಣ ಬಾಬಾಸಾಬ ಅಲಿಯಾಸ ಬಾಬಾಜಾನ ರವರಿಗೆ 2 ಲಕ್ಷದ 50 ಸಾವಿರ ಹಣ ಕೊಡಲಾಗಿದೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಅದನ್ನು ನೋಡಿ ಒಪ್ಪಿದ ಕಾರಣ ಸದರಿ ನಿಪಿ-5 ರ ಭಾಗವನ್ನು ನಿಡಿ-12 ಎಂದು ಗುರುತಿಸಲಾಯಿತು. ನಿಪಿ-5 ರ ಖರೀದಿ ಪತ್ರದ 4 ಮತ್ತು 6 ನೇ ಪುಟದಲ್ಲಿ ತಿದ್ದುಪಡಿಯ ಕಡೆಗೆ ನಾನು ಹಾಗೂ ನನ್ನ ಇಬ್ಬರೂ ಸಹೋದರರು ಸಹಿ

ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಅದನ್ನು ನೋಡಿ ಒಪ್ಪಿದ ಕಾರಣ ಸದರಿ ತಿದ್ದುಪಡಿಗಳು ಹಾಗೂ ಅಲ್ಲಿ ಇರುವ ಸಹಿಗಳನ್ನು ಒಟ್ಟಾಗಿ ನಿಡಿ-13 ಮತ್ತು ನಿಡಿ-14 ಎಂದು ಗುರುತಿಸಲಾಯಿತು. ನಿಡಿ-13 ಮತ್ತು 14 ರಲ್ಲಿ ಕಾಣುತ್ತಿರುವ ಸಹಿಗಳನ್ನು ನಾನು ಉಪನೊಂದಣಾಧಿಕಾರಿ ಕಚೇರಿಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಾನು ಉಪನೊಂದಣಾಧಿಕಾರಿ ಕಚೇರಿಗೆ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ರ ಕೊನೆಯ ಪುಟದಲ್ಲಿ ಕಾಣುತ್ತಿರುವ ಸಹಿಗಳು ನನ್ನದು ಹಾಗೂ ನನ್ನ ಸಹೋದರರದ್ದು ಇರುತ್ತದೆ ಎಂದರೆ ಸರಿಯಲ್ಲ, ನಾನು ಉಪನೊಂದಣಾಧಿಕಾರಿ ಕಚೇರಿಗೆ ಹೋಗೆ ಇರುವುದಿಲ್ಲ. ನಾನು ಈಗ ನಿಪಿ-3 ರ ನಲ್ಲಿರುವ ಸಹಿಗಳನ್ನು ನೋಡುತ್ತಿದ್ದು ಸದರಿ ಸಹಿಗಳು ಹಾಗೂ ನಿಪಿ-5 ರ ಕೊನೆಯ ಪುಟದಲ್ಲಿ ಕಾಣುತ್ತಿರುವ ಸಹಿಗಳು ಒಂದೇ ತರಹ ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತಾನು ಉಪನೊಂದಣಾಧಿಕಾರ ಕಚೇರಿಯಲ್ಲಿ ಯಾವುದೇ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ರ ಕೊನೆಯ ಪುಟ ಹಾಗೂ ನಿಪಿ-5 ರ ಕೊನೆಯ ಪುಟದಲ್ಲಿ ಇರುವ ಸಹಿಗಳು ನನ್ನ ಹಾಗೂ ನನ್ನ ಸಹೋದರರ ಸಹಿಗಳು ಆಗಿರುತ್ತವೆ ಎಂದರೆ ಸಾಕ್ಷಿಯು ನಿಪಿ-3 ರ ಕೊನೆಯ ಪುಟದಲ್ಲಿ ಇರುವ ಸಹಿಗಳು ಮಾತ್ರ ತನ್ನ ಹಾಗೂ ತನ್ನ ಸಹೋದರರ ಸಹಿಗಳಾಗಿರುತ್ತವೆ ಎಂದು ನುಡಿಯುತ್ತಾರೆ. ನಿಪಿ-3 ರ ಕೊನೆಯ ಪುಟದಲ್ಲಿ ಇರುವ ಸಹಿಗಳು ನನ್ನ ಹಾಗೂ ನನ್ನ ಸಹೋದರರದ್ದು ಆಗಿರುತ್ತವೆ. ಸಾಕ್ಷಿಯು ಅದನ್ನು ನೋಡಿ ಒಪ್ಪಿದ ಕಾರಣ ಸದರಿ ಸಹಿಗಳನ್ನು ನಿಡಿ-15 ರಿಂದ ನಿಡಿ-17 ಎಂದು ಗುರುತಿಸಲಾಯಿತು. ನಿಪಿ-4 ರಲ್ಲಿ ಕೊನೆಯ ಪುಟದಲ್ಲಿ ಕೊನೆಯ 5 ಸಾಲುಗಳು ಕೈಬರಹದಲ್ಲಿ ಬರೆದದ್ದು ಸರಿಯಿರುತ್ತದೆ. ನಾನು ಈಗ ನಿಪಿ-3 ಮತ್ತು ನಿಡಿ-11 ನೋಡುತ್ತಿದ್ದು ನಿಪಿ-3 ರಲ್ಲಿರುವ ಮೂರು ಸಹಿಗಳು ಹಾಗೂ ನಿಡಿ-11 ರ ಕೊನೆಯ ಪುಟದಲ್ಲಿರುವ ಆರು ಸಹಿಗಳು ಒಂದೇ ಆಗಿರುತ್ತವೆ ಎಂದರೆ ಸರಿಯಲ್ಲ. ಈ ದಾವೆಯ ಹೆಚ್ಚಿನ ಮಾಹಿತಿ ನನ್ನ ಅಣ್ಣನಾದ ಬಾಬಾಜಾನ ರವರಿಗೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು

ಮುಂದುವರೆದು ತನಗೆ ಹಾಗೂ ತನ್ನ ಸಹೋದರರಿಗೆ ಎಲ್ಲರಿಗೂ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ಈ ದಾವೆ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾನು ಪ್ರತಿವಾದಿಯಿಂದ ಪೂರ್ತಿ ಕ್ರಯದ ಪ್ರತಿಫಲವಾದ 7 ಲಕ್ಷದ 80 ಸಾವಿರ ಹಣವನ್ನು ಪಡೆದು ಖರೀದಿ ಪತ್ರ ಮಾಡಿಕೊಟ್ಟಿದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಹಳೆಯ ಕ್ರಯ ಪತ್ರವನ್ನು ಪ್ರತಿವಾದಿಗೆ ನಾನು 1997 ರಲ್ಲಿ ಕೊಟ್ಟಿದ್ದೆ. ನಿಪಿ-5 ರ ದಾಖಲೆಯನ್ನು ಬರೆದುಕೊಟ್ಟ ನಂತರ ನಿಪಿ-1 ಮತ್ತು 2 ದಾಖಲೆಗಳಲ್ಲಿ ನಾವು ಪ್ರತಿವಾದಿಗೆ ಕೊಟ್ಟಿರುತ್ತೇವೆ.

5. ದಾವಾ ಸ್ವತ್ತಿಗೆ ಪ್ರತಿವಾದಿಯಾದ ದೀನಾನಾತ ಕಾರೇಕರ ರವರು ಕಂಪೌಂಡ ಗೋಡೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತಿನ ಕಡೆಗೆ ಸುಮಾರು 20 ರಿಂದ 25 ವರ್ಷಗಳಿಂದ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ 7 ಲಕ್ಷದ 80 ಸಾವಿರ ಹಣ ಸಿಕ್ಕಿರುವುದಿಲ್ಲ ಎಂದು ನಾನು ದಾವೆಯಲ್ಲಿ ಎಲ್ಲಿಯೂ ನಮೂದು ಮಾಡಿರುವುದಿಲ್ಲ. ನಾನು ನನ್ನ ವಾದಪತ್ರದಲ್ಲಿ ನನಗೆ 3 ಲಕ್ಷ ಮಾತ್ರ ತಲುಪಿದೆ ಎಂದು ನಮೂದು ಮಾಡಿರುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**